(ಗೊಂದಲ)

ಶ್ರೀ ಜೆ.ಎಸ್. ಶಿವಸಂಜಪ್ಪ :— ಬ್ಲೂಪ್ರಿಂಟ್ ಆಗಿ ಪ್ರಾಜೆಕ್ಟ್ ತಯಾರಾಗಿದೆ. ನೀರು ಜಾಸ್ತಿ ಇದ್ದರೆ ಕೊಡಲಿ. ಇಲ್ಲದಿದ್ದರೆ ಅವರಿಗೇ ಬಿಟ್ಟು ಬಿಟ್ಟು ನಮಗೇ ಕೊಡಿ ಎಂದು ನಾವು ಕೇಳುವುದಿಲ್ಲ. ನೀರು ಎಕ್ಸಸ್ ಇದ್ದರೆ ನಮಗೆ ಕೊಡಲಿ ಎಂದು ಕೇಳಿದ್ದೇವೆ. ಎಕ್ಸಸ್ ಇದೆ ಎಂದು ರಿಪೋರ್ಟ್ ಇದೆ. ದಯವಿಟ್ಟು ಅದಕ್ಕೆ ಅವರು ಒಪ್ಪಿಕೊಳ್ಳಲಿ. ಈ ಹಂತದಲ್ಲಿ ತರಲೆ ಮಾಡತಕ್ಕಂಥಾದ್ದು ಏನೂ ಅವಶ್ಯಕತೆ ಇಲ್ಲ.

ಶ್ರೀ ಕೆ. ಜಯರಾಮಶೆಟ್ಟಿ :— ಗ್ರಾಮೀಣ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಿ. ಅದು ಬಿಟ್ಟು ಎಲ್ಲೆಲ್ಲೋ ನೀರನ್ನು ತೆಗೆದುಕೊಂಡು ಹೋಗುವುದು ಸರಿಯಲ್ಲ.

ಯಲಹಂಕ ಡಿ.ಜಿ.ಪಿ. ಯೋಜನೆ.

194 (1470) ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಯಲಹಂಕ ಡಿ.ಜಿ.ಪಿ. ಯೋಜನೆಯಡಿಯಲ್ಲಿರುವ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಎಷ್ಟು?

ಆ) ಈ ಯೋಜನೆಯ ಉತ್ಪಾದನಾ ಗುರಿ ಎಷ್ಟು?

ಇ) ಕಳೆದ 5 ವರ್ಷಗಳಲ್ಲಿ ಈ ಯೋಜನೆಯಡಿ ನಿಗದಿಪಡಿಸಿದ ಮತ್ತು ಸಾಧಿಸಿದ ಗುರಿ ಎಷ್ಟು?

ಈ) ಅಲ್ಲಿ ಉತ್ಪಾದಿಸಿದ ವಿದ್ಯುತ್ ಉತ್ಪಾದನಾ ವೆಚ್ಚವೆಷ್ಟು?

ಉ) ಅದನ್ನು ಗ್ರಾಹಕರಿಗೆ ಸರಬರಾಜು ಮಾಡುವ ಬೆಲೆ ಎಷ್ಟು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಯಲಹಂಕ ಡಿ.ಜಿ.ಪಿ. ಯೋಜನೆಯ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ 127.92 ಮೆಗಾವಾಟ್‌ಗಳು

ಈ ಯೋಜನೆಯ ಸಾಮಾನ್ಯ ವಾರ್ಷಿಕ ಉತ್ಪಾದನಾ ಗುರಿ 767.5 ದಶಲಕ್ಷ ಯೂನಿಟ್ಟುಗಳು.

ಕಳೆದ 5 ವರ್ಷಗಳಲ್ಲಿ ನಿಗಧಿಪಡಿಸಿದ ಗುರಿ ಮತ್ತು ಸಾಧನೆಗಳ ವಿವರಗಳು ಈ ಕೆಳಕಂಡಂತಿದೆ.

ವರ್ಷ	ಗುರಿ	ಸಾಧನೆ
1993-94	1993-94ರ ಸಾಲಿನಲ್ಲಿ ಈ ಯೋಜನೆಯು ಕಾರ್ಯಾರಂಭ ಮಾಡಿದ್ದರಿಂದ ವಿದ್ಯುತ್ ಉತ್ಪಾದನೆಗೆ ಗುರಿಯನ್ನು ನಿಗದಿ ಪಡಿಸಿರುವುದಿಲ್ಲ	148.5 ದಶಲಕ್ಷ ಯೂನಿಟ್ಟುಗಳು

ವರ್ಷ	ಗುರಿ	ಸಾಧನೆ
1994-95	767.5 ದಶಲಕ್ಷ ಯೂನಿಟ್ಸುಗಳು	364.6 ದಶಲಕ್ಷ ಯೂನಿಟ್ಸುಗಳು
1995-96	767.5 ದಶಲಕ್ಷ ಯೂನಿಟ್ಸುಗಳು	542.5 ದಶಲಕ್ಷ ಯೂನಿಟ್ಸುಗಳು
1996-97	767.5 ದಶಲಕ್ಷ ಯೂನಿಟ್ಸುಗಳು	536.7 ದಶಲಕ್ಷ ಯೂನಿಟ್ಸುಗಳು
1997-98	640.0 ದಶಲಕ್ಷ ಯೂನಿಟ್ಸುಗಳು (1997-98 ರಲ್ಲಿ ಇಂಜಿನ್‌ಗಳ 12,000 ಗಂಟೆಗಳ ಪೂರ್ವನಿಯೋಜಿತ ನಿರ್ವಹಣೆಯ ಕಾರ್ಯವನ್ನು ಕೈಗೊತ್ತಿಕೊಂಡ ಕಾರಣದಿಂದಾಗಿ ಗುರಿಯನ್ನು ಇಳಿಸಲಾಯಿತು.	665.5 ದಶಲಕ್ಷ ಯೂನಿಟ್ಸುಗಳು
1998-99	672.0 ದಶಲಕ್ಷ ಯೂನಿಟ್ಸುಗಳು (1998-99 ರಲ್ಲಿ ಇಂಜಿನ್‌ಗಳ 24,000 ಗಂಟೆಗಳ ಪೂರ್ವನಿಯೋಜಿತ ನಿರ್ವಹಣೆಯ ಕಾರ್ಯವನ್ನು ಕೈಗೊತ್ತಿಕೊಂಡ ಕಾರಣದಿಂದಾಗಿ ಗುರಿಯನ್ನು ಇಳಿಸಲಾಯಿತು.	563.2 ದಶಲಕ್ಷ ಯೂನಿಟ್ಸುಗಳು. (ಫೆಬ್ರವರಿ 99ರ ಅಂತ್ಯದವರೆಗೆ)

ಈ) ಕಳೆದ ಸಾಲಿನಲ್ಲಿ ಅಂದರೆ 1997-98 ರಲ್ಲಿ ಉತ್ಪಾದನಾ ವೆಚ್ಚ ಪ್ರತಿ ಯೂನಿಟ್ಟಿಗೆ ರೂ.3.80 ಆಗಿತ್ತು.

1998-99ರ ವರ್ಷ ಇನ್ನೂ ಅಂತ್ಯಗೊಳ್ಳಬೇಕಾಗಿರುವುದರಿಂದ, ಈ ವರ್ಷವು ಅಂತ್ಯಗೊಂಡ ನಂತರ ವಿದ್ಯುತ್ ಉತ್ಪಾದನಾ ವೆಚ್ಚವನ್ನು ಲೆಕ್ಕಾಚಾರ ಮಾಡಲಾಗುವುದು.

ಉ) ಮಂಡಳಿಯು ವಿಧಿಸಿದ ಸರ್ಜಾಜನ್ನು ನೀಡಿ, ಈ ಯೋಜನೆಯಲ್ಲಿ ಭಾಗವಹಿಸಿದ ವಿದ್ಯುತ್ ಬಳಕೆದಾರರಿಗೆ ಪ್ರತೀ ಯೂನಿಟ್ಟಿಗೆ ರೂ. 3.55ರ ದರದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ಬಾಕಿ ಉಳಿದಿರುವ ವಿದ್ಯುತ್ ಇತರ ಬಳಕೆದಾರರ ಉಪಯೋಗಕ್ಕಾಗಿ ಗ್ರೀಡ್‌ಗೆ ಸೇರ್ಪಡೆಯಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:— ಉತ್ತರದಲ್ಲಿ ಉತ್ಪಾದನೆಯ ವೆಚ್ಚ ಯೂನಿಟ್‌ಗೆ ಮೂರು ರೂಪಾಯಿ ಎಂಭತ್ತು ಪೈಸೆ ಎಂದು ಹೇಳಿದ್ದಾರೆ. ನೀವು ಅದಕ್ಕೆ ಬ್ರೇಕ್ ಅಪ್ ಕೊಡಿ. ಆಮೇಲೆ ಅದಕ್ಕೆ ಫ್ಯುಯಲ್ ಯಾವುದು? ಡೀಸಲ್ ಅಥವಾ ಯಾವುದನ್ನು

ಉಪಯೋಗ ಮಾಡುತ್ತೀರಿ ಎಂದು ಗೊತ್ತಾಗಬೇಕು. ಒಂದು ಲೀಟರ್ ಪ್ಯುಯಲ್‌ಗೆ ಎಷ್ಟು ಯೂನಿಟ್ ಉತ್ಪಾದನೆಯಾಗುತ್ತದೆ? ಈ ಮೂರಕ್ಕೆ ನನಗೆ ಮಾಹಿತಿ ಕೊಡಿ.

ಶ್ರೀ ಶರಣಬಸಪ್ಪ ದರ್ಶನಾಪುರ :— ಮಾನ್ಯ ಸದಸ್ಯರು ಕಾಸ್ಟ್ ಏನಿದೆ ಎಂದು ಕೇಳಿದ್ದಾರೆ. ಮತ್ತೆ ಎಲ್ಲೆಲ್ಲಿ ಸಪ್ಲೈ ಮಾಡುತ್ತೀರಿ, ಪ್ರತಿವರ್ಷ ಉತ್ಪಾದನೆ ಬಗ್ಗೆ ಕೇಳಿದ್ದಾರೆ. ಇದರ ಬ್ರೇಕ್‌ಅಪ್ ಮತ್ತು ಒಂದು ಲೀಟರ್ ಡೀಸಲ್‌ಗೆ ಎಷ್ಟು ಜನರೇಟ್ ಆಗುತ್ತದೆ ಎನ್ನುವುದರ ಸಂಪೂರ್ಣ ಮಾಹಿತಿಯನ್ನು ತರಿಸಿ ನಾಳೆಯೇ ಅವರಿಗೆ ನಾನು ಒದಗಿಸುತ್ತೇನೆ.

ಅರೆ ಖುಷ್ಕಿ ಪ್ರದೇಶಗಳು ಯಳಂದೂರು ತಾಲ್ಲೂಕು ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೆರೆ ಆಶ್ರಯದಲ್ಲಿ ವ್ಯವಸಾಯ ಮಾಡುತ್ತಿರುವುದು.

195(1465) ಶ್ರೀ ಎಸ್. ಜಯಣ್ಣ (ಕೊಳ್ಳೇಗಾಲ) :— ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಯಳಂದೂರು ತಾಲ್ಲೂಕು ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಲವಾರು ಶತಮಾನಗಳಿಂದ ಕೆರೆ ಆಶ್ರಯದಲ್ಲಿನ ಜಮೀನುಗಳಲ್ಲಿ ತರೀಬೆಳೆ ತೆಗೆಯುತ್ತಿದ್ದೂ ಸರಿಯಷ್ಟೆ. ಕಬಿನಿ ನಾಲೆ ನಿರ್ಮಾಣದ ನಂತರ ಆ ಪ್ರದೇಶಗಳನ್ನು ಅರೆ ನೀರಾವರಿ ಎಂದು ಘೋಷಿಸಿರುವುದು ನಿಜವೇ. ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

2. ಸದರಿ ಪ್ರದೇಶಗಳನ್ನು ಪೂರ್ಣ ನೀರಾವರಿ ಎಂದು ಘೋಷಿಸಲು ಅಲ್ಲಿನ ರೈತರು ಮನವಿ ಸಲ್ಲಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಆ ಬಗ್ಗೆ ಕೈಕೊಂಡಿರುವ ಕ್ರಮಗಳೇನು?

3. ಯಾವಾಗ ಆ ಪ್ರದೇಶಗಳನ್ನು ಪೂರ್ಣ ನೀರಾವರಿ ಎಂದು ಘೋಷಿಸಲಾಗುವುದು?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1. ಕಬಿನಿ ಯೋಜನೆಯಡಿಯಲ್ಲಿನ ಬರುವ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕಿನ ಅಚ್ಚುಕಟ್ಟು ವ್ಯಾಪ್ತಿಗೆ ವಿತರಣಾ ನಾಲೆ 41 ರಿಂದ 62 ರವರೆಗೆ ಒಳಪಟ್ಟಿರುತ್ತದೆ ಮತ್ತು ಹಲವಾರು ಸಣ್ಣ ಕೆರೆಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಹಾಗೂ ಹಲವಾರು ಶತಮಾನಗಳಿಂದ ಕೆರೆಗಳ ಆಶ್ರಯ ಪ್ರದೇಶಗಳಲ್ಲಿ ತರಿ ಬೆಳೆ ಬೆಳೆಯುವುದು ತಿಳಿದು ಬಂದಿರುತ್ತದೆ. ಇದಕ್ಕೆ ಖಾತ್ರಿಯಾದ ನೀರು ಸರಬರಾಜು ಇದ್ದಿಲ್ಲವಾದ್ದರಿಂದ ಕಬಿನಿ ಯೋಜನೆಯು ಅದ ಮೇಲೆ ಖಾತ್ರಿಯಾದ ನೀರು ಸರಬರಾಜನ್ನು ಅರೆ ನೀರಾವರಿ ಬೆಳೆಗೆ ಸರಬರಾಜು ಮಾಡಲು ಅವಕಾಶ ಕಲ್ಪಿಸಿದ್ದು ಅದರ ರೀತ್ಯಾ ಕಬಿನಿ ಯೋಜನೆಯಡಿಯಲ್ಲಿ ಬರುವ ಮೇಲ್ಕಂಡ ಅಚ್ಚುಕಟ್ಟು ಪ್ರದೇಶಗಳನ್ನು ಅರೆ ನೀರಾವರಿ ಎಂದು ಘೋಷಿಸಲಾಗಿದೆ.

Atchkat coming under Yalandur & Kollegal Taluka lies in the distributory from 41 to 62 of KRBC. Before advent of KRBC come wet atchkat were under tanks, which were not getting assured water supply. After advent of Kabini Project, these lands get assured water